# ಭವತಾರಿಣಿ ಕಾಳಿ

ಶ್ರೀಮತಿ ವಿಜಯ ಭಾರತಿ



ಕಾಲ ಎಲ್ಲವನ್ನೂ ಹದಗೊಳಿಸುವಂಥದ್ದು, ಎಲ್ಲವನ್ನೂ ಪರಿಪಕ್ವಗೊಳಿಸುವಂಥದ್ದು, ಎಲ್ಲವನ್ನೂ ಏಕಮುಖವಾಗಿ ತೆಗೆದುಕೊಂಡು ಹೋಗುವಂಥಾದ್ದು. ಹುಟ್ಟು-ಸಾವುಗಳ ನಡುವೆ ಸಾಗುತ್ತಿರುವ ಈ ಕ್ರಿಯಾಶಕ್ತಿಯೆ ಕಾಲ.

ಕಾಲ ಎನ್ನುವುದು ಒಂದು ಮಾತೃಗರ್ಭ. ಎಲ್ಲ ಲಯವಾಗಿ ಮತ್ತೆ ಸೃಷ್ಟಿರೂಪವನ್ನು ಪಡೆಯುವ ಸುರುಳಿ ಸುತ್ತುತ್ತಿರುವ ಸುಳಿ. ಅದರಿಂದಾಗಿಯೇ ಇದನ್ನು ನಿರ್ವಹಿಸುವವಳು ತಾಯಿ ಕಾಳಿ ಎಂದು ಸಾಧಕರು ಅವಳನ್ನು ಕಂಡಿದ್ದಾರೆ.

'ಕಾಲ' ಎಂಬ ಮೂಲಪದಕ್ಕೆ ಇರುವ ಇನ್ನೂ ಕೆಲವು ಅರ್ಥಗಳೆಂದರೆ, ಎಣಿಸುವುದು, ಅಳೆಯುವುದು ಮತ್ತು ಚಲಿಸುವುದು. ಚಲಿಸುವ ಕಾಲವನ್ನು ಎಣಿಸಬಹುದು, ಅಳೆಯಬಹುದು ಆದರೆ ನಿಲ್ಲಿಸಲಾಗುವುದಿಲ್ಲ.

### ಶಕ್ತಿ ಸಂಕೇತಗಳು

ಮಾತೃ ಅಥವಾ ಶಕ್ತಿ ಉಪಾಸನೆಯ ಮುಖ್ಯ ಆರಾಧನಾ ಭಾಗವಾದ ದಶಮಹಾವಿದ್ಯಾಸ್ವರೂಪಿಣಿ ಸ್ವರೂಪಗಳಲ್ಲಿ ಪ್ರಥಮ ಶಕ್ತಿಸ್ವರೂಪಿಣಿ ಕಾಳಿ. ಈ ಮಹಾಮಾತೆಯನ್ನು ಆಸುರೀಶಕ್ತಿಯ ದಮನಕ್ಕಾಗಿಯೇ ಕಾಲಸ್ವರೂಪಳಾದ ದೇವಿಯಾಗಿ ಪೂಜಿಸುತ್ತಾರೆ. ವಿಗ್ರಹರೂಪದಲ್ಲಿಯೂ, ಯಂತ್ರರೂಪದಲ್ಲಿಯೂ ಆರಾಧಿಸುವ ಕ್ರಮವಿದೆ. ಆರು ತ್ರಿಭುಜಗಳ ನಡುವೆ ಬಿಂದು ಸ್ವರೂಪಗಳಾಗಿ ಈ ಶಕ್ತಿ ನೆಲೆಗೊಂಡಿದ್ದಾಳೆ. ತ್ರಿಭುಜಗಳ ಸುತ್ತ ಮೂರು ವಲಯಗಳಿವೆ. ಅದನ್ನು ಸುತ್ತುವರಿದ ೮ ದಳಗಳಿವೆ. ಕೊನೆಯ ಆವರಣವಾಗಿ ಅಷ್ಟದಿಕ್ ಕೋಣವಿದೆ.

ವಿಗ್ರಹ ರೂಪಿಣಿಯೂ ಆದ ಈ ತಾಯಿ ಶಿವನನ್ನು ಮೆಟ್ಟಿ ನಿಂತಿದ್ದಾಳೆ. ರುಂಡಮಾಲೆಯಿಂದ ಅಲಂಕೃತಳಾಗಿ, ರುಂಡವನ್ನು ಒಂದು ಕೈಯಲ್ಲಿ ಹಿಡಿದು ದುಷ್ಟದಮನೆಯಾಗಿದ್ದಾಳೆ. ಹಿಡಿದ ಕತ್ತಿ, ಚತುರ್ಭುಜ, ವರಾಭಯಹಸ್ತ, ಹಾಗೂ ತ್ರಿನಯನ ಶೋಭಿತೆಯಾದವಳು. ಧೀರ ಗಂಭೀರ ನಿಲುವು, ಭಯಂಕರತೆಯಲ್ಲಿಯೂ ರಮ್ಯತೆಯನ್ನು ತೋರುವವಳು.

**ಇದೇ ತಿಂಗಳು ಸ್ನಾನಯಾತ್ರೆಯ ದಿನ (೧೬.೬.೨೦೦೦) ದಕ್ಷಿಣೇಶ್ವರದಲ್ಲಿ ಭವತಾರಿಣಿ ಕಾಳಿಯ ಪ್ರತಿಷ್ಠಾಪನೆಯಾದ ಪುಣ್ಯದಿನ. ಇದರ ಸ್ಮರಣಾರ್ಥವಾದ ಈ ಲೇಖನದಲ್ಲಿ ಕಾಳಿಯ ಸಾಂಕೇತಿಕ ಅರ್ಥವನ್ನು ವಿವರಿಸಲಾಗಿದೆ. ಶ್ರೀಮತಿ ವಿಜಯ ಭಾರತಿಯವರು ಉತ್ತಮ ಲೇಖಕರು ಮತ್ತು ಉಪನ್ಯಾಸಕರು.**

### ಕಾಲರೂಪಿಣಿ ಕಾಳಿ

ಕಾಲವನ್ನು ಮಾತೃರೂಪದಲ್ಲಿ, ಶಕ್ತಿರೂಪದಲ್ಲಿ ಕಂಡು ಆರಾಧಿಸುವುದೇ ಕಾಳೀ ಸ್ವರೂಪದ ಅಂತರಾರ್ಥ. ಕಾಲ ಅಂದರೆ ಯಾವುದು ವಿಶ್ವವನ್ನು ಆಳುತ್ತಾ ಇದೆಯೋ ಅದು. ಎಲ್ಲ ಬದಲಾವಣೆಯ ಹಿಂದೆ ಇದ್ದು ತಾನು ಮಾತ್ರ ಬದಲಾಗದೆ ಸ್ಥಿರವಾಗಿ ನಿಲ್ಲುವ ವಿಶಿಷ್ಟ ಶಕ್ತಿ. ನಿರ್ವಿಕಾರವಾಗಿ, ನಿತ್ಯ ನಿರಂತರವಾಗಿ ಹರಿಯುವ ಹರಿವು ಕಾಲ. ಹೇಗೆ ಕನ್ನಡಿಯಲ್ಲಿ ಬಿದ್ದ ಪ್ರತಿಬಿಂಬದಿಂದ ಕನ್ನಡಿಗೆ ಯಾವ ಸೋಂಕೂ ಇಲ್ಲವೊ ಅದೇ ರೀತಿ ಕಾಲದಲ್ಲಿಯೂ ಎಲ್ಲ ಸಾಗಿಹೋದರೂ ಅದು ಮಾತ್ರ ನಿರ್ಲಿಪ್ತ.

### ಸೃಷ್ಟಿಲಯಕಾರಿಣಿ

ಅವಳ ಕಾಲಾತೀತ ಸ್ಥಿತಿಯನ್ನು ಕಾಣುವುದೇ ಮಾನವ ಜೀವನದ ಪರಮ ಉದ್ದೇಶ. ಕಾಲ ಗರ್ಭದಲ್ಲಿ ಎಲ್ಲ ಲಯವಾದ ಮೇಲೆ ತಾನೇ ಮತ್ತೆ ಸೃಷ್ಟಿಯ ಆರಂಭ? ಕಾಳಿ ತನ್ನಲ್ಲಿ ಎಲ್ಲವನ್ನೂ ಭರಿಸುತ್ತಾಳೆ. ಅದೇ ಮುಂದಿನ ಸೃಷ್ಟಿಗೆ ಸಾಮಗ್ರಿ, ಕಾಳಿಯೆ ಉಸಿರು, ವಿಶ್ವದ ಪ್ರಾಣಶಕ್ತಿ. ಎಲ್ಲ ಜೀವಕೋಟಿಯ ಆಗುಹೋಗುಗಳ ಸಾಕ್ಷೀರೂಪ ಅವಳು. ನಮ್ಮಲ್ಲಿನ ಎಲ್ಲ ರೀತಿಯ ಕ್ರಿಯಾಕರ್ಮಗಳು, ಅವು ಶಾರೀರಿಕವಾಗಿರಲಿ ಮಾನಸಿಕವಾಗಿರಲಿ ಆಧ್ಯಾತ್ಮಿಕವಾಗಿರಲಿ, ಅವುಗಳಲ್ಲಿ ಯಾವುದನ್ನು ನಾಶಗೊಳಿಸಬೇಕೋ ನಾಶಗೊಳಿಸಿ ಜ್ಞಾನಪ್ರಾಪ್ತಿಗೆ ನಮ್ಮನ್ನು ಅಣಿಮಾಡುವವಳು ಕಾಳಿ.

ಸೃಷ್ಟಿಯಲ್ಲಿ ಲಯದ ಅಂಶವನ್ನು ಲಯದಲ್ಲಿ ಸೃಷ್ಟಿಯ ಅಂಶವನ್ನು ಅಂಕುರಾರ್ಪಣ ಮಾಡುವ ಶಕ್ತಿಯೇ ಕಾಳಿ. ದಿನ ನಿತ್ಯದ ಬಾಳಿನಲ್ಲಿ ಒಂದು ಕ್ಷಣ ಹುಟ್ಟಿ, ಇನ್ನೊಂದು ಕ್ಷಣ ನಾಶವಾಗುತ್ತದೆ. ಆ ಇನ್ನೊಂದು ಕ್ಷಣ ನಾಶವಾದ ಮೇಲೆ ಮತ್ತೊಂದು ಕ್ಷಣ ಹುಟ್ಟುತ್ತದೆ. ಹಗಲು ಹುಟ್ಟಿ ಕಾಲದಲ್ಲಿ ಲಯವಾದ ಮೇಲೆ ರಾತ್ರಿ ಹುಟ್ಟುತ್ತದೆ. ರಾತ್ರಿ ಕಾಲದಲ್ಲಿ

ಲಯವಾಗಿ ಹಗಲು ಹುಟ್ಟುತ್ತದೆ. ಅದರಂತೆ ಬಾಲ್ಯ ಸತ್ತು ಯೌವನ ಹುಟ್ಟುತ್ತದೆ. ಯೌವನ ಸತ್ತು ಮುಪ್ಪು ಹುಟ್ಟುತ್ತದೆ. ಮುಪ್ಪೂ ಸತ್ತಮೇಲೆ ಸಾವು ಮೈದೋರುತ್ತದೆ. ಮನಸ್ಸಿನಲ್ಲಿ ಎಷ್ಟೋ ಆಸೆ ಆಕಾಂಕ್ಷೆಗಳು, ತೃಪ್ತಿ, ಅತೃಪ್ತಿಗಳು ಹುಟ್ಟಿ ಸಾಯುತ್ತವೆ, ಸತ್ತು ಹುಟ್ಟುತ್ತವೆ. ಇವೆಲ್ಲವೂ ತಾಯಿ ಕಾಳಿಯ ಲೀಲೆಯೆ. ಇವನ್ನೆಲ್ಲ ಕಾಣುವುದೇ ದಿವ್ಯದೃಷ್ಟಿ. ಇವನ್ನೆಲ್ಲ ಅರಿಯುವುದೇ ಜಾಗೃತ ಜ್ಞಾನ, ಅದೇ ಮಹಾಕಾಳಿಯ ಕೃಪೆ.



ದಕ್ಷಿಣೇಶ್ವರದ ಭವತಾರಿಣಿ ಕಾಳೀ

## ಕಾಳೀ ಉಪಾಸನೆಯಿಂದ ಸಿದ್ಧಿ

ಹೀಗೆ ಕಾಳಿಯ ಸ್ವರೂಪ ಕಾಲದ ಸಾರಸ್ವರೂಪ, ಎಲ್ಲ ದೇವದೇವಿಯರ ಮೂಲಸ್ವರೂಪ. ಇಂತಹ ಮಹಾಶಕ್ತಿ ಕಾಳಿಯ ಉಪಾಸಕರು ಶ್ರೀರಾಮಕೃಷ್ಣ ಪರಮಹಂಸರು. ಸಂತರಲ್ಲಿ ಮಹಾ ಸಂತರಾಗಿ, ಭಕ್ತರಲ್ಲಿ ಮಹಾಭಕ್ತರಾಗಿ, ಯೋಗಿಗಳಲ್ಲಿ ಮಹಾಯೋಗಿಯಾದವರು. ಸರ್ವಧರ್ಮ ಸಮನ್ವಯತೆ, ಸರ್ವಯೋಗ ಸಮನ್ವಯತೆ, ಸರ್ವದರ್ಶನ ಸಮನ್ವಯತೆಯನ್ನು ಸಾಧಿಸಿ ತೋರಿದವರು. ಶ್ರೀವಿದ್ಯಾ ಉಪಾಸನೆಗೆ, ತಂತ್ರ ಸಾಧನೆಗೆ ನಿತ್ಯ ನೂತನವಾದ ಮೆರುಗನ್ನು ಕೊಟ್ಟವರು. ಭಗವತಿ ಕಾಳಿ ಅವರಿಗೆ ಭವತಾರಿಣಿ ಕಾಳಿಯಾದಳು.

ರಾಣಿ ರಾಸಮಣಿ ಕಾಶೀವಿಶ್ವನಾಥನ ದರ್ಶನಕ್ಕಾಗಿ ಎಲ್ಲ ಸಿದ್ಧತೆಗಳನ್ನು ಮಾಡಿಕೊಂಡು ಇನ್ನೇನು ಹೊರಡಲಿದ್ದಾಗ ಆ ತೀರ್ಥಯಾತ್ರೆಯನ್ನು ನಿಲ್ಲಿಸಿ ತನಗೆ ಒಂದು ತೀರ್ಥಕ್ಷೇತ್ರವನ್ನು ನಿರ್ಮಾಣ ಮಾಡಬೇಕೆಂದು ಆದೇಶ ನೀಡಿದವಳು ಸ್ವಯಂ ಮಹಾಕಾಳಿಯೆ. ವಿಶ್ವಮಾತೆಯ ಮಹಾ ಸಂಕಲ್ಪಕ್ಕೆ ರಾಸಮಣಿ ನಿಮಿತ್ತಳಾಗಿ ಅದ್ಭುತವಾದ ರೀತಿಯಲ್ಲಿಯೇ ಅದನ್ನು ನಿರ್ವಹಿಸಿದಳು. ದಕ್ಷಿಣೇಶ್ವರ ಮಹಾಕಾಳಿಯ ಭಕ್ತರ ಆನಂದ ಮೇಳದ ಆಸ್ಥಾನವಾಯಿತು.

ಭವತಾರಿಣಿಯ ಮಹಾನ್ ಅರ್ಚಕ ಶ್ರೀರಾಮಕೃಷ್ಣರು, ಅವಳ ನೇತೃತ್ವದಲ್ಲಿ ಸರ್ವಸಾಧನೆಯ, ಸರ್ವಧರ್ಮದ, ಸಾರರೂಪದ, ಮಹಾಪೂರವನ್ನೇ ಅಲ್ಲಿ ಹರಿಸಿದರು. ಆ ಕ್ಷೇತ್ರದಲ್ಲಿ ಹರಿಯುತ್ತಿರುವ ಗಂಗೆ ಕೇವಲ ಪಾವನ ಗಂಗೆಯಾಗಿರದೆ ಜ್ಞಾನಗಂಗೆಯಾಗಿಯೂ ಹರಿದಳು. ಪ್ರತಿಮಾ ರೂಪಿಣಿಯಾದ ಕಾಳಿಯೇ ದ್ರವರೂಪಿಣಿಯಾದ ಗಂಗೆಯೂ ಆಗಿ ಶ್ರೀರಾಮಕೃಷ್ಣರಿಗೆ ಆರಾಧ್ಯಳಾದಳು.

ಭೈರವಿ ಬ್ರಾಹ್ಮಣಿ, ತಂತ್ರಸಾಧನೆಯಲ್ಲಿ ಉನ್ನತಮಟ್ಟದ ಸಾಧಕಳಾಗಿ ಭಗವತಿಯ ಆದೇಶದಂತೆ ತಾನೇ ತಾನಾಗಿ ಶ್ರೀರಾಮಕೃಷ್ಣರನ್ನು ಅರಸುತ್ತ ಅಲ್ಲಿಗೆ ಬಂದವಳು. ದಶ ಮಹಾ ವಿದ್ಯೆಗಳಲ್ಲಿ ಪ್ರಪ್ರಥಮಳಾದ ಕಾಳಿಕಾಮಾತೆಯ ಆ ಕ್ಷೇತ್ರದಲ್ಲಿ ಅವಳು ನಿರ್ವಹಿಸಿದ ಪಾತ್ರ ಅತ್ಯಂತ ಮಹತ್ತರವಾದುದು. ತಂತ್ರ ಸಾಧನೆಯಲ್ಲಿ ಶ್ರೀರಾಮಕೃಷ್ಣರಿಗೆ ಮಾರ್ಗದರ್ಶನ ಮಾಡುವುದರ ಜೊತೆಗೆ ಆ ಕಾಳೀ ಭಕ್ತನಲ್ಲಿದ್ದ ದೈವತ್ವವನ್ನು ಗುರುತಿಸಿ ಅವತಾರ ಪುರುಷನೆಂದು ಸಾರಿದವಳು.

ಶ್ರೀಶಾರದಾಮಣಿ ಭವತಾರಿಣಿಯ ಎಲ್ಲ ಸ್ವರೂಪವನ್ನೂ ಶಾಂತವಾಗಿ ಶ್ರೀರಾಮಕೃಷ್ಣರಿಂದ ಆವಾಹಿಸಿಕೊಂಡು ಸೌಮ್ಯಕಾಳಿಯಾದರು. ತಮ್ಮ ಷೋಡಶ ಕಲೆಗಳನ್ನೂ ಹದಿನಾರು ಯತಿಶ್ರೇಷ್ಠರ ಮೂಲಕ ತುಂಬಿ ಹರಿಯುವಂತೆ ಮಾಡಿದರು.

ಮಹಾಕಾಳಿ ಆದ್ಯಾಶಕ್ತಿ, ಇಚ್ಛಾ ಶಕ್ತಿಯಾಗಿ ರಾಣಿ ರಾಸಮಣಿಯ ಮೂಲಕ, ಜ್ಞಾನಶಕ್ತಿಯಾಗಿ ಭೈರವಿ ಬ್ರಾಹ್ಮಣಿಯ ಮೂಲಕ, ಕ್ರಿಯಾಶಕ್ತಿಯಾಗಿ ಶ್ರೀಶಾರದಾಮಣಿಯ ಮೂಲಕ ಹರಿದಿರುವ ಈ ರೀತಿ ಗುಪ್ತವಾದದ್ದೂ ಹೌದು, ವ್ಯಾಪ್ತವಾದದ್ದೂ ಹೌದು.

## ವಿವೇಕಾನಂದರ ಪರಿವರ್ತನೆ

ಸ್ವಾಮಿ ವಿವೇಕಾನಂದರು ದಕ್ಷಿಣೇಶ್ವರಕ್ಕೆ ಬರುವುದಕ್ಕೆ ಆರಂಭಿಸಿದ ಮೊದಮೊದಲಲ್ಲಿ ಭವತಾರಿಣಿ ಕಾಳಿಗೆ ನಮಿಸುತ್ತಿರಲಿಲ್ಲ. ಮೂರ್ತಿ ಪೂಜೆ ಬ್ರಹ್ಮಸಮಾಜದ ಅನುಯಾಯಿಗಳಿಗೆ ಸಲ್ಲದ ವಿಷಯವಾಗಿತ್ತು. ಶ್ರೀರಾಮಕೃಷ್ಣರಲ್ಲಿ ಮಾತ್ರ ಅತೀವವಾದ ಪ್ರೀತಿ, ಆದರ, ಭಕ್ತಿ. ಆದರೆ ಕಾಳಿಯನ್ನು ಮಾತ್ರ ದೂರವೇ ಇಟ್ಟರು—ಅವರಿಗೆ ಆಗಿನ್ನೂ ಸ್ಪಷ್ಟವಾಗಿರಲಿಲ್ಲ ಶ್ರೀರಾಮಕೃಷ್ಣರು ತಾಯಿ ಕಾಳಿಯ ಇನ್ನೊಂದು ರೂಪ ಎಂಬುದು—ಅವರನ್ನು ಆದರಿಸಿದರೆ ಕಾಳಿಯನ್ನು ಆದರಿಸಿದಂತೆ, ಅವರನ್ನು ಪ್ರೀತಿಸಿದರೆ ತಾಯಿ ಕಾಳಿಯನ್ನು ಪ್ರೀತಿಸಿದಂತೆ ಎಂಬ ರಹಸ್ಯ ಅವರಿಗೆ ಇನ್ನೂ ಮನವರಿಕೆಯಾಗಿರಲಿಲ್ಲ. ತಂದೆಯ ಅನಿರೀಕ್ಷಿತ ಸಾವು, ಸಹಿಸಲಾಗದ ಕಷ್ಟ, ಬಡತನ, ನಿಸ್ಸಹಾಯಕತೆ—ಕೊನೆಗೊಮ್ಮೆ ತಾಯಿ ಕಾಳಿಯ ಚರಣದಲ್ಲಿ ನರೇಂದ್ರನನ್ನು ಶರಣಾಗುವಂತೆ ಮಾಡಿದುವು. ಬದುಕಿನ ಕಾವಿನಲ್ಲಿ ಕುದ್ದು ಬೆಂದು ಹದವಾಗಿದ್ದ ಅವರ ಹೃದಯವನ್ನು ತಾಯಿ ಕಾಳಿ ತನ್ನ ಎರಡೂ ಕೈಗಳಿಂದ ಪ್ರೀತಿ ವಾತ್ಸಲ್ಯಗಳಿಂದ ಎತ್ತಿಕೊಂಡಳು. ಅಂದಿನಿಂದ ಭವತಾರಿಣಿ ಕಾಳಿ ಸ್ವಾಮೀಜಿಯ ಸರ್ವಸ್ವವಾಗಿ ಅವರ ಬದುಕನ್ನೆಲ್ಲ ಆವರಿಸಿ ನಿಂತಳು.

ಶ್ರೀರಾಮಕೃಷ್ಣ ಮಹಾತರಂಗ ಭವತಾರಿಣಿ ಕಾಳಿಯ ಶಕ್ತಿ ಸಮುದ್ರದಿಂದ ಎದ್ದಿರುವ ಮಹಾತರಂಗ. ಅದರಲ್ಲಿ ಮಿಂದು ತೊಯ್ಯುವುದು ಅಲೆಗಳೊಡನೆ ಆಡಿ ಗೊತ್ತಿದ್ದವರಿಗೆ ಮಾತ್ರ ಸಾಧ್ಯ. ಉಳಿದವರು ತೀರದಲ್ಲಿ ನಿಂತು ಅದರ ತುಂತುರ ಹನಿಗಳಿಂದಲೇ ಆನಂದಿಸಬಹುದು—ಹನಿಯೋ, ಅಲೆಯೋ ಎಲ್ಲವೂ ಅವಳವೇ. ಪ್ರಾಪ್ತಿ ಎಷ್ಟೋ ಅಷ್ಟೆ, ಮಹಾಭಾಗ್ಯ. **ಕ್ಷುಧಾತೃಷಾರ್ತಾ ಜನನೀಂ ಸ್ಮರಂತಿ** (ಹಸಿವು ಬಾಯಾರಿಕೆಗಳಿಂದ ನರಳುವವರು ಜನನಿಯನ್ನು ಸ್ಮರಿಸುತ್ತಾರೆ.)